# ಜಿತೇಂದ್ರ ಪುತ್ರಿಯ ಶೋನಲ್ಲಿ ಕಂಗನಾ

ಬಾಲಿವುಡ್‌ನಲ್ಲಿನ ಸ್ವಜನಪಕ್ಷಪಾತದ ಕುರಿತು ಪದೇ ಪದೇ ದನಿಯೆತ್ತುತ್ತಾ ಬಂದಿರುವ ಕಂಗನಾ ರನೋಟ್ ಈಗ ಏಕ್ತಾ ಕಪೂರ್ ನಿರ್ಮಾಣದ ರಿಯಾಲಿಟಿ ಶೋ ಒಂದರ ನಿರೂಪಕಿ. 'ಲಾಕ್ ಅಪ್' ಎನ್ನುವುದು ಆ ಶೋನ ಶೀರ್ಷಿಕೆ. ಆಯ್ಕೆಯಾಗುವವರನ್ನು ಜೈಲಿನಂತಹ ವಾತಾವರಣದಲ್ಲಿ ಇಟ್ಟು, ಅವರಿಗೆ ಬೇಕಾದ ಮೂಲ ವಸ್ತುಗಳನ್ನು ಪೂರೈಸಿ, ಅಲ್ಲಿ ಎಂತೆಂಥವೋ ಆಟಗಳನ್ನಾಡಿಸುವ ಶೋ ಇದು.

'ನಾನು ಸ್ವಜನಪಕ್ಷಪಾತದ ವಿಷಯ ಹೇಳಿದ್ದೆ, ನಿಜ. ಆದರೆ, ಏಕ್ತಾ ಕಪೂರ್ ಬದುಕಿನಲ್ಲಿ ತಮ್ಮ ತಂದೆ ಜಿತೇಂದ್ರ ಹೆಸರು ಹೇಳಿಕೊಂಡು ಮೇಲೆ ಬಂದವರಲ್ಲ. ಸ್ವಂತ ಶ್ರಮದಿಂದ ಇಷ್ಟೆಲ್ಲ ಸಾಧಿಸಿದ್ದಾರೆ. ಹೀಗಾಗಿ ಇಂತಹ ಶೋ ನಿರೂಪಿಸಲು ನಾನು ಒಪ್ಪಿಕೊಂಡೆ' ಎನ್ನುವುದು ಕಂಗನಾ ಸಮಜಾಯಿಷಿ.

ಸಾಮಾಜಿಕ ಜಾಲತಾಣದಲ್ಲಿ ಸಮಾಜೋ–ರಾಜಕೀಯ ವಿಷಯಗಳ ಬಗೆಗೆ ಆಗೀಗ ಟೀಕಾಪ್ರಹಾರ ಮಾಡುವುದರಲ್ಲಿ ಕಂಗನಾ ನಿಸ್ಸೀಮರು. ನಟ–ನಟಿಯರನ್ನೂ ಅವರು ನಿರ್ಭಿಡೆಯಿಂದ ಟೀಕಿಸುತ್ತಿರುತ್ತಾರೆ. ಫಿಲ್ಟರ್ ಇಲ್ಲದೆ ಮಾತನಾಡುವ ಅವರ ವ್ಯಕ್ತಿತ್ವವನ್ನೇ ಏಕ್ತಾ ಕಪೂರ್ ಬಂಡವಾಳ ಮಾಡಿಕೊಳ್ಳಲು ಹೊರಟಿದ್ದಾರೆ ಎನ್ನುವುದು ಟಿ.ವಿ. ಶೋ ವಿಮರ್ಶಕರ ಅಭಿಪ್ರಾಯ.



'ನಾನು ನಟಿಯಾಗಿ ಗಟ್ಟಿ ಪಾತ್ರಗಳನ್ನು ಮಾಡಿರುವುದರಿಂದ ಏಕ್ತಾ ನಿರೂಪಕಿಯಾಗುವ ಅವಕಾಶವಿತ್ತರು. ಪಾತ್ರಗಳಲ್ಲಿ ಗಟ್ಟಿಗಿತ್ತಿಯಾಗಿರುವುದು ಬೇರೆ. ಇಲ್ಲಿ ನಾನು ಸಹಜ ವ್ಯಕ್ತಿತ್ವದಿಂದಲೇ ಕಾರ್ಯಕ್ರಮ ನಿರೂಪಿಸಬೇಕಿದೆ. ಆ ಸ್ವಾತಂತ್ರ್ಯವನ್ನು ಏಕ್ತಾ ಕಪೂರ್ ಕೊಟ್ಟಿದ್ದಾರೆ' ಎಂದು ಕಂಗನಾ ತಮ್ಮ ಆಯ್ಕೆ ಹೇಗೆ ನಡೆಯುತ್ತೆನ್ನುವುದನ್ನು ಹೇಳಿಕೊಂಡರು.

ಎಂಎಕ್ಸ್ ಪ್ಲೇಯರ್‌ನಲ್ಲಿ ಈ ರಿಯಾಲಿಟಿ ಶೋ ಪ್ರದರ್ಶಿತವಾಗುತ್ತಿದೆ. ■

# ವಿಜಯ್‌ಗೆ ರಶ್ಮಿಕಾ ನಾಯಕಿ?

ರಶ್ಮಿಕಾ ಮಂದಣ್ಣ ಅವರನ್ನು ಪದೇ ಪದೇ ಅದೃಷ್ಟ ಹುಡುಕಿಕೊಂಡು ಬರುತ್ತಿದೆ. 'ಪುಷ್ಪಾ' ಚಿತ್ರದಲ್ಲಿನ ಅವರ ಪಾತ್ರದ ಬರವಣಿಗೆಯ ಕುರಿತು ತಕರಾರುಗಳಿದ್ದವು. ಚಿತ್ರದ ಓಘಕ್ಕೆ ಪೂರಕವಾಗಿ ಅವರ ಪಾತ್ರವಿದ್ದ ದೃಶ್ಯಗಳು ಇರಲಿಲ್ಲ ಎಂದು ವಿಮರ್ಶಕರು ಟೀಕಿಸಿದ್ದರು. ಆದರೂ, ಜನರಿಗೆ ರಶ್ಮಿಕಾ ಇಷ್ಟವಾದರು.



'ಪುಷ್ಪಾ' ಸಿನಿಮಾ ಬಗೆಗೆ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾದದ್ದು ನಿಜವಾದರೂ, ಆ ಸಿನಿಮಾದ ಜನಪ್ರಿಯ ಅಂಶಗಳು ಆಮೇಲಾಮೇಲೆ ಹೆಚ್ಚು ಜನಪ್ರಿಯವಾದದ್ದನ್ನೂ ಕಂಡೆವು. ಈಗ ರಶ್ಮಿಕಾ ಅವರಿಗೆ ತಲಪತಿ ವಿಜಯ್ ನಾಯಕರಾಗಿ ನಟಿಸಲಿರುವ ತಮಿಳು ಸಿನಿಮಾದ ಅವಕಾಶ ಹುಡುಕಿಕೊಂಡು ಬಂದಿದೆ ಎಂಬ ಮಾತಿದೆ.

2007ರಲ್ಲಿ ಪ್ರಭಾಸ್–ಇಲಿಯಾನಾ ಡಿ ಕ್ರೂಜ್ ಜೋಡಿಯಾ 'ಮುನ್ನಾ' ತೆಲುಗು ಚಿತ್ರವನ್ನು ನಿರ್ದೇಶಿಸುವ ಮೂಲಕ ಪದಾರ್ಪಣೆ ಮಾಡಿದ್ದ ವಂಶಿ ಪಡಿಪಲ್ಲಿ 'ತಲಪತಿ 66' ಎಂದು ಸದ್ಯಕ್ಕೆ ಹೇಳಲಾಗುತ್ತಿರುವ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳಲಿದ್ದಾರೆ. ಪೂಜಾ ಹೆಗ್ಡೆ, ಕಿಯಾರಾ ಅಡ್ವಾಣಿ ಇಬ್ಬರಲ್ಲಿ ಒಬ್ಬರನ್ನು ನಾಯಕಿಯನ್ನಾಗಿಸಬೇಕು ಎಂಬ ಚರ್ಚೆ ಮೊದಲು ನಡೆದಿತ್ತಂತೆ. ಆಮೇಲೆ ರಶ್ಮಿಕಾ ಮಂದಣ್ಣ ಆ ಪಾತ್ರಕ್ಕೆ ಹೊಂದುತ್ತಾರೆ ಎಂದು ಚಿತ್ರತಂಡದ ಬಹುತೇಕರು ಸಲಹೆ ನೀಡಿದ ಕಾರಣ ಅವರತ್ತ ನಿರ್ದೇಶಕರ ಚಿತ್ತ ನೆಟ್ಟಿದೆ ಎನ್ನುವುದು ತಮಿಳು ಚಿತ್ರರಂಗದ ಓಣಿಗಳಲ್ಲಿ ಹರಿದಾಡುತ್ತಿರುವ ಸುದ್ದಿ.

ಈ ವಿಷಯವನ್ನು ರಶ್ಮಿಕಾ ಇನ್ನೂ ಸ್ಪಷ್ಟಪಡಿಸಿಲ್ಲ. ದಿಲ್ ರಾಜು ಹಾಗೂ ಶಿರೀಶ್ ನಿರ್ಮಿಸಲಿರುವ ಈ ಚಿತ್ರವನ್ನು ಏಕಕಾಲದಲ್ಲಿ ಬಹುಭಾಷೆಗಳಲ್ಲಿ ತರಬೇಕೆನ್ನುವ ಉದ್ದೇಶವಿದೆ. ವಿಜಯ್ ಹಾಗೂ ರಶ್ಮಿಕಾ ಜೋಡಿಯಿಂದ ಮಾರುಕಟ್ಟೆ ಹೆಚ್ಚು ಕುದುರಲಿದೆ ಎನ್ನುವ ಲೆಕ್ಕಾಚಾರವಿದೆ.

ರಶ್ಮಿಕಾ ಆಯ್ಕೆಯಾಗಿರುವ ಬಗೆಗೆ ಇದುವರೆಗೆ ಅಧಿಕೃತ ಪ್ರಕಟಣೆ ಹೊರಬಿದ್ದಿಲ್ಲ. ವಿಜಯ್ ಅಭಿನಯದ ಈ ಚಿತ್ರವು ಇದೇ ತಿಂಗಳಿನಿಂದ ಚಿತ್ರೀಕರಣ ಪ್ರಾರಂಭಿಸಲಿದೆ. ದೀಪಾವಳಿ ಹೊತ್ತಿಗೆ ಅಥವಾ ಸಂಕ್ರಾತಿಯ ಸಂದರ್ಭದಲ್ಲಿ ತೆರೆಗೆ ತರುವ ಬಯಕೆ ಚಿತ್ರತಂಡದ್ದು.

'ಎವಡು', 'ಊಪಿರಿ', 'ಮಹರ್ಷಿ' ಚಿತ್ರಗಳನ್ನು ನಿರ್ದೇಶಿಸಿರುವ ವಂಶಿ ಚಿತ್ರಕಥಾ ಹೆಣಿಗೆಯ ಕೌಶಲವನ್ನು ವಿಜಯ್ ಬಹಳ ಹಿಂದೆಯೇ ಮೆಚ್ಚಿಕೊಂಡಿದ್ದರು. 'ಪುಷ್ಪಾ' ಚಿತ್ರದ ನೃತ್ಯದ ಕೆಲವು ವರಸೆಗಳನ್ನು ಜನರು ದೊಡ್ಡ ಸಂಖ್ಯೆಯಲ್ಲಿ ಅನುಕರಿಸತೊಡಗಿರುವುದು ರಶ್ಮಿಕಾಗೆ ವರದಾನವಾಗುತ್ತಿರಬೇಕು.

■ ವಿಶಾಖ ಎನ್.